

ಹೊರಟೇ ಬಿಟ್ಟರು. ಇವನಿಗೆ ಅವರನ್ನು ಪ್ರತಿಭಟಿಸಲೂ ಮನಸ್ಸಾಗಲಿಲ್ಲ. ಹೆಂಡತಿಯ ನೆನಪಲ್ಲೇ ಮತ್ತೊಂದು ಬಾಟಲಿ ಖಾಲಿಮಾಡಿ ತೂರಾಡುತ್ತ ಹೋಗಿ ಮಲಗಿದ. ನಸುಕಿನ ಜಾವ ಎಚ್ಚರವಾದಾಗ ಈ ಘಟನೆ ಪ್ರಜ್ಞೆಗೆ ಬಂದಿತ್ತು. ಆತಂಕದಿಂದ ಅತ್ತಿತ್ತ ಓಡಾಡಿದ. ಆದರೆ ಪರಿಸ್ಥಿತಿ ಕೈಮೀರಿ ಹೋಗಿತ್ತು!

ರಾತ್ರಿಹೋದ ಟ್ರಕ್ಕಿನ ಚಕ್ರಕ್ಕೆ ಜಿಂಕೆಯೊಂದು ಬಲಿಯಾದದ್ದೆ ದೊಡ್ಡ ಪ್ರಮಾದವಾಯ್ತು. ರಾವ್ ಸಾಹೇಬನೊಂದಿಗೆ ಬಂದ ರೇಂಜರ್ ಸಾಹೇಬರು ಕೊನೇರಿಯನ್ನು ಹಿಗ್ಗಾಮುಗ್ಗಾ ಬೈಯ್ದರು. 'ಇದೆಲ್ಲವೂ ನಿನ್ನ ಕುಡಿತದಿಂದಲೇ ಆಗಿರೋದು, ಇನ್ನಾದರೂ ಕುಡಿತ ಬಿಟ್ಟು ನೆಟ್ಟಗೆ ಕೆಲಸ ಮಾಡಿದರೆ ಒಳಿತು, ಇಲ್ಲದಿದ್ದರೆ ನಿನ್ನನ್ನು ಕೆಲಸದಿಂದ ಕಿತ್ತೊಗೆಯುತ್ತೇನೆ' ಎಂದು ಖಡಾತುಂಡಾಗಿ ಎಚ್ಚರಿಕೆ ನೀಡಿದರು. ತೀರ ಹೆದರಿದ್ದ ಕೊನೇರಿ ತನ್ನ ತಪ್ಪೊಪ್ಪಿಕೊಂಡ. ಕೆಲಸ ಕೈತಪ್ಪಿದರೆ ಮತ್ತೇ ಬೀದಿಗೆ ಬೀಳಬೇಕಾಗುತ್ತದೆಂದು ಯೋಚಿಸಿ, ಹೆಂಡದ ಸಹವಾಸವೇ ಬಿಟ್ಟ. ಆದರೂ ಗೋವೆಯಿಂದ ಬರುವ ವಾಹನಗಳನ್ನು ಕಂಡಾಗೆಲ್ಲ ಹೆಂಡದ ನೆನಪಾದರೂ ಸಂಕಲ್ಪವೆಂಬಂತೆ ಆ ಬಯಕೆಯನ್ನು ಅದುಮಿಟ್ಟುಕೊಳ್ಳತೊಡಗಿದ. ಬರುಬರುತ್ತ ಅವನಿಗದು ಅಭ್ಯಾಸವಾಯ್ತು. ವಾಹನದಿಂದಲೇ ಆಗಾಗ ಕೈಮಾಡಿ, 'ಹೆಂಡದ ಬಾಟಲಿ ಬೇಕೇ...?' ಎಂದು ಮೂಕಸನ್ನೆಯಲ್ಲಿ ಕೇಳುತ್ತಿದ್ದವರೂ 'ಕೊನೇರಿ ಈಗ ಮೊದಲಿನಂತಿಲ್ಲ ಬಿಡ್ರಪ್ಪ, ಆದ್ರೂ ಒಳ್ಳೆದಾಯ್ತು ತಂದಿದ್ದ ಬಾಟಲಿಗಳು ನಮ್ಮಲ್ಲೇ ಉಳಿದವು' ಎಂದು ತಮ್ಮ-ತಮ್ಮಲ್ಲೇ ಮಾತಾಡಿಕೊಳ್ಳುತ್ತ ಹೊರಟುಹೋಗುತ್ತಿದ್ದರು.

ಆದರೆ, ಮೊದಲು ಹೆಂಡದ ಮತ್ತಲ್ಲಿ ಮರೆತುಹೋಗುತ್ತಿದ್ದ ಸಮಸ್ಯೆಗಳು ಕುಡಿತ ಬಿಟ್ಟಾದ ಮೇಲೆ ಕೊನೇರಿಗೆ ಮತ್ತೇ ಹೇಗಲೇರಿದಂತೆ ಅನ್ನಿಸಿತು.